**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/529/2018/ARE-4

Multi Storied Building,
Dr. B.R. Ambedkar Veedhi,
Bengaluru-560 001
Date: **25/05/2021**

## RECOMMENDATION

Sub:- Departmental inquiry against;
1) Sri N. Srinivasa Reddy, Executive Engineer, Bruhat Bengaluru Mahanagara Palike, Byatarayanapur Division, Bengaluru (Presently retired)
2) Sri K. Devegowda, Assistant Engineer, Bruhat Bengaluru Mahanagara Palike, Byatarayanapura Division, Bengaluru – Reg.

Ref:- 1) Govt. Order No.**ನಅಇ 506 ಎಂಎನ್‌ಯು 2018,** Bengaluru dated 17/11/2018.
2) Nomination order No.UPLOK-1/DE/529/2018, Bengaluru dated 1/12/2018 of Upalokayukta-1, State of Karnataka, Bengaluru
3) Inquiry Report dated 24/5/2021 of Additional Registrar of Enquiries-4, Karnataka Lokayukta, Bengaluru

----

The Government by its order dated 17/11/2018 initiated the disciplinary proceedings against (1) Sri N. Srinivasa Reddy, Executive Engineer, Bruhat Bengaluru Mahanagara Palike, Byatarayanapur Division, Bengaluru (Presently retired) and (2) Sri K. Devegowda, Assistant Engineer, Bruhat Bengaluru Mahanagara Palike, Byatarayanapura Division, Bengaluru, (hereinafter referred to as Delinquent Government Officials 1 & 2, for short as DGO-1 and DGO-2 respectively) and entrusted the Departmental Inquiry to this Institution.

2. This Institution by Nomination Order No.UPLOK-1/DE/529/2018 Bengaluru dated 1/12/2018 nominated Additional Registrar

of Enquiries-4, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGOs 1 & 2 for the alleged charge of misconduct, said to have been committed by them.

3. The DGO-1 Sri N. Srinivasa Reddy, Executive Engineer and DGO-2 Sri K. Devegowda, Assistant Engineer – both of Bruhat Bengaluru Mahanagara Palike, Byatarayanapura Division, Bengaluru, were tried for the following charge:-

"ನೀವು–1ನೇ ಆಪಾದಿತ ಸರ್ಕಾರಿ ನೌಕರ/ಶ್ರೀ ಎನ್. ಶ್ರೀನಿವಾಸ ರೆಡ್ಡಿ, ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ., ಬೆಂಗಳೂರು ಹಾಗೂ ನೀವು–2ನೇ ಆಪಾದಿತ ಸರ್ಕಾರಿ ನೌಕರರು/–ಶ್ರೀ ಕೆ. ದೇವೇಗೌಡ, ಸಹಾಯಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ, ಬೆಂಗಳೂರು, ಆದ ನೀವುಗಳು, ಬಿಬಿಎಂಪಿ ವಾರ್ಡ್ ನಂ. 9 ರಲ್ಲಿ ರಾಜಕಾಲುವೆ ಕಾಮಗಾರಿ ನಿರ್ವಹಿಸಿದ್ದು, ಶ್ರೀ ಪ್ರಕಾಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಅವರ ಆಕ್ಷೇಪಣೆಯ ಜೊತೆ ಹಾಜರುಪಡಿಸಿರುವ ಚೆಕ್‌ಲಿಸ್ಟ್ ಪ್ರತಿಯನ್ನು ಪರಿಶೀಲಿಸಿದಾಗ, ದಿನಾಂಕ: 22/07/2011 ರಂದು ಆಡಳಿತಾತ್ಮಕ ಅನುಮೋದನೆ ನೀಡಿರುವ ಕಾಮಗಾರಿಯ ವಿವರ ಈ ಕೆಳಗಿನಂತೆ ಇರುವುದು ಕಂಡು ಬರುತ್ತದೆ.

"Providing Concrete covering slab to Storm water drain from Thindlukere outlet weir to Jn. Of Bommasandra drain (BPO14) near Nanjappa Circle, GKVK compound near Thindlu slum to Jn. of Bommsandra Drain (BPO14) near Thindlu main Road Dhanalakshmi layout to Kodigehalli kere in Ward No. 9 BBMP Vidyanranyapura Sub-Division".

ಸದರಿ ಕಾಮಗಾರಿಯ ವಿವರವನ್ನು ಪರಿಶೀಲಿಸಿದಾಗ, ತಿಂಡ್ಲು ಕೆರೆ ಕೋಡಿಯಿಂದ ಬೊಮ್ಮಸಂದ್ರದ ನಂಜಪ್ಪ ಸರ್ಕಲ್ ತನಕ ಚರಂಡಿಗೆ ಕಾಂಕ್ರೀಟ್ ಹಾಗೂ ಸ್ಲಾಬನ್ನು ಅಳವಡಿಸುವ ಕಾಮಗಾರಿಗೆ ಅನುಮೋದನೆಯನ್ನು ನೀಡಿದ್ದು, ಸದರಿ

ಸಂಪೂರ್ಣ ಕಾಮಗಾರಿಗೆ ರೂ. 75 ಲಕ್ಷ ಅಂದಾಜು ಮೊತ್ತಕ್ಕೆ ಅನುಮೋದನೆ ನೀಡಿರುವುದು ಕಂಡು ಬರುತ್ತದೆ. ಅದೇ ರೀತಿ ರೂ. 23,75,000/- ಕ್ಕೆ ಗುತ್ತಿಗೆದಾರರಿಗೆ ಬಿಲ್‌ನ್ನು ತಯಾರಿಸಲು ಕಡತ ರವಾನಿಸಿರುವುದು ಕಂಡು ಬರುತ್ತದೆ. ಆದರೆ, ತಾಂತ್ರಿಕ ವಿಭಾಗದವರ ವರದಿಯನ್ನು ಪರಿಶೀಲಿಸಿದಾಗ, ಕಾಮಗಾರಿಯನ್ನು ಕೈಗೊಳ್ಳಲಾಗಿರುವ ರಾಜಕಾಲುವೆಯ ತಿಂಡ್ಲು ಕೆರೆ ಕೋಡಿಯಿಂದ ಪ್ರಾರಂಭವಾಗಿ ಪಶ್ಚಿಮ ದಿಕ್ಕಿನ ಕಡೆಗೆ ಹೋಗುತ್ತಿದ್ದು, ಸದರಿ ಕೆರೆಯ ಕೋಡಿಯಿಂದ ಸುಮಾರು 80 ಮೀಗಳ ನಂತರ ಆರ್.ಸಿ.ಸಿ. ಮಳೆ ನೀರಿನ ಚರಂಡಿ ನಿರ್ಮಾಣ ಮಾಡಿರುವುದರನ್ನು ಗಮನಿಸಿಲಾಗಿದೆ ಎಂದು ಹೇಳಿರುವುದು ಕಂಡು ಬರುತ್ತದೆ. ಅದನ್ನು ಗಮನಿಸಿದಾಗ ಕಾಮಗಾರಿ ಆದೇಶದಂತೆ ಕಾಮಗಾರಿಯನ್ನು ನಿರ್ವಹಿಸದೇ 80ಮೀ., ಉದ್ದನ್ನು ಬಿಟ್ಟು ಕಾಮಗಾರಿ ಪ್ರಾರಂಭಿಸಿರುವುದು ಕಂಡು ಬರುತ್ತದೆ. ಅದನ್ನು ಗಮನಿಸಿದಾಗ, ನಿಗದಿಪಡಿಸಿದಂತೆ ಕಾಮಗಾರಿಯನ್ನು ಮಾಡದೇ ಇರುವುದು ಕಂಡು ಬರುತ್ತದೆ.

Storm water drain ಕಾಮಗಾರಿಯನ್ನು ತಿಂಡ್ಲು ಕೆರೆ ಕೋಡಿಯಿಂದ ಬೊಮ್ಮಸಂದ್ರದ ನಂಜಪ್ಪ ಸರ್ಕಲ್ ತನಕ ಮಾಡಲು ದಿನಾಂಕ: 22/07/2011 ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ಅದೇ ದಿನಾಂಕದಂದು ತಾಂತ್ರಿಕ ಮಂಜೂರಾತಿಯನ್ನು ಕೂಡ ನೀಡಿರುವುದು ಕಂಡು ಬರುತ್ತದೆ. ತಾಂತ್ರಿಕ ವಿಭಾಗದವರು ನೀಡಿರುವ ವರದಿಯ ಪುಟ ಸಂ. 8 ರ ಕಂಡಿಕೆ (ಇ) ಯಲ್ಲಿ ಈ ಕೆಳಗಿನಂತೆ ಅಭಿಪ್ರಾಯ ನೀಡಿರುವುದು ಕಂಡು ಬರುತ್ತದೆ.

> "ದೂರಿಗೆ ಸಂಬಂದಿಸಿದ ಚರಂಡಿ ಕಾಮಗಾರಿಯನ್ನು ಟೆಂಡರ್ ಆಧಾರದಲ್ಲಿ ಗುತ್ತಿಗೆದಾರರಿಗೆ ದಿನಾಂಕ; 09/04/2012 ರಂದು ವಹಿಸಲಾಗಿದ್ದು, ಅನಂತರ ಗುತ್ತಿಗೆದಾರರು ಸದರಿ ಕಾಮಗಾರಿಯನ್ನು ದಿನಾಂಕ: 29/12/2012 ರಂದು ಪೂರ್ಣಗೊಳಿಸಿರುವುದು ಅಂತಿಮ ಬಿಲ್‌ನಲ್ಲಿ ನಮೂದಿಸಿರುವುದು ಅಳತೆ ಪುಸ್ತಕದಲ್ಲಿ ಕಂಡು ಬರುತ್ತದೆ".

ಮೇಲಿನ ಅಂಶವನ್ನು ಗಮನಿಸಿದಾಗ, ದಿನಾಂಕ: 22/07/2011 ರಂದು ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ನೀಡಿರುವ ಕಾಮಗಾರಿಯನ್ನು ದಿನಾಂಕ: 29/12/2012 ರಂದು ಪೂರ್ಣಗೊಳಿಸಿರುವ ಬಗ್ಗೆ ಅಂತಿಮ ಬಿಲ್‌ನಲ್ಲಿ ನಮೂದಿಸಿರುವುದು ಮತ್ತು ಅಳತೆ ಪುಸ್ತಕದಲ್ಲಿ ಕಂಡು ಬಂದಿರುವ ಬಗ್ಗೆ ಉಲ್ಲೇಖ ಕಂಡು ಬರುತ್ತಿದ್ದು, ಆದರೆ ಅಂತಿಮ ಅಭಿಪ್ರಾಯದಲ್ಲಿ ಸುಮಾರು 80 ಮೀ., ರಾಜಕಾಲುವೆಯನ್ನು

ನಿರ್ವಹಿಸಲಾಗಿರುವುದಿಲ್ಲ ಎಂಬುದಾಗಿ ವರದಿಯಲ್ಲಿ ನಮೂದು ಕಂಡು ಬರುತ್ತದೆ. ಅದನ್ನು ಪರಿಶೀಲಿಸಿದಾಗ, ದಿನಾಂಕ: 22/07/2011 ರ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ಪ್ರಕಾರ ಸಂಪೂರ್ಣ ಕಾಮಗಾರಿಯನ್ನು ನಿರ್ವಹಿಸದೇ ಇದ್ದರೂ ಸಹ ಅಂತಿಮ ಬಿಲ್‌ನಲ್ಲಿ ಕಾಮಗಾರಿ ಪೂರ್ಣಗೊಂಡಿರುವುದಾಗಿ ಬಿಲ್‌ನ್ನು ಪಡೆದಿರುವುದು ಹಾಗೂ ಅಳತೆ ಪುಸ್ತಕದಲ್ಲಿ ನಮೂದಿಸಿರುವ ಅಂಶ ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದ್ದರಿಂದ, ಸಂಪೂರ್ಣ ಕಾಮಗಾರಿಯನ್ನು ಪೂರ್ಣಗೊಳಿಸದೇ ಇದ್ದರೂ ಸಹ ಕಾಮಗಾರಿ ಪೂರ್ಣಗೊಂಡಿದೆಯೆಂದು ಅಂತಿಮ ಬಿಲ್‌ನಲ್ಲಿ ನಮೂದಿಸಿರುವುದು ಹಾಗೂ ಅಳತೆ ಪುಸ್ತಕದಲ್ಲಿ ನಮೂದಿಸಿರುವುದು ನಿಮ್ಮಗಳ ದುರ್ನಡತೆಯನ್ನು ತೋರಿಸುತ್ತದೆ.

ದಿನಾಂಕ: 22/07/2011 ರಂದು ನೀಡಿರುವ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ಪ್ರಕಾರ ರೂ. 75 ಲಕ್ಷಕ್ಕೆ ಪೂರ್ಣ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿದ್ದರೂ ಸಹ ಅದನ್ನು ಪೂರ್ಣಗೊಳಿಸದೇ ನಂತರದಲ್ಲಿ ಮುಂದುವರೆದ ಕಾಮಗಾರಿಗೆ ಸಂಬಂಧಪಟ್ಟಂತೆ ದಿನಾಂಕ: 20/08/2015 ರಂದು ಆಡಳಿತಾತ್ಮಕ ಅನುಮೋದನೆ ಹಾಗೂ ದಿನಾಂಕ: 21/08/2015 ರಂದು ತಾಂತ್ರಿಕ ಮಂಜೂರಾತಿಯನ್ನು ಪಡೆದು ರೂ. 44 ಲಕ್ಷಕ್ಕೆ ಹೊಸ ಕಾಮಗಾರಿ ಆದೇಶವನ್ನು ಪಡೆದುಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಿರುವುದು ಕಂಡು ಬರುತ್ತದೆ. ರೂ. 75 ಲಕ್ಷಕ್ಕೆ ಕಾಮಗಾರಿ ಪೂರ್ಣಗೊಳ್ಳಬೇಕಿದ್ದರೂ ಸಹ ಪೂರ್ಣಗೊಳಿಸದೇ ಅರ್ಧದಲ್ಲಿ ಕುಂಠಿತಗೊಳಿಸಿ ಹಣ ದುರುಪಯೋಗ ಪಡಿಸಿರುವ ಅಂಶ ಕಂಡು ಬರುತ್ತದೆ. ಯಾವುದೇ ಆದೇಶದಲ್ಲಿ ಮತ್ತು ಅನುಮೋದನೆಯಲ್ಲಿ ಕಾಮಗಾರಿ ನಡೆಸಬೇಕಾಗಿರುವ ಕಾಲುವೆಯ ಉದ್ದವನ್ನು ನಮೂದು ಮಾಡಿರುವುದು ಕಂಡು ಬರುತ್ತಿಲ್ಲ. ಅಲ್ಲದೇ ನೀವುಗಳು-1 ಮತ್ತು 2ನೇ ಆಪಾದಿತ ಸರ್ಕಾರಿ ನೌಕರರು ಕಾಮಗಾರಿಗೆ ಸಂಬಂಧಪಟ್ಟಂತೆ ಸೂಕ್ತ ದಾಖಲಾತಿಗಳನ್ನು ಹಾಜರುಪಡಿಸದೇ ಇರುವ ಕಾರಣ ದಾಖಲಾತಿಗಳನ್ನು ನಿರ್ವಹಿಸಿಲ್ಲವೆಂಬ ಪ್ರತಿಕೂಲ ನಿರ್ಣಯಕ್ಕೆ ಬರಬೇಕಾಗಿದೆ. ಮೇಲಿನ ಅಂಶಗಳನ್ನು ಗಮನಿಸಿದಾಗ, ನೀವುಗಳು-1 ಮತ್ತು 2ನೇ ಆಪಾದಿತ ಸರ್ಕಾರಿ ನೌಕರರು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

ನೀವುಗಳು-1 ಮತ್ತು 2ನೇ ಆಪಾದಿತ ಸರ್ಕಾರಿ ನೌಕರರು ಸರ್ಕಾರಿ ಸೇವಕರಾಗಿದ್ದು, ನಿಮ್ಮಗಳ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ, ಸಾರ್ವಜನಿಕ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966ರ (3)(i) ರಿಂದ (iii) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದು, ಈ ವಿಚಾರಣಾ ಪ್ರಾಧಿಕಾರದ ಮುಂದೆ ವಿಚಾರಣೆಗೊಳಪಡುತ್ತೀರೆಂದು ಈ ದೋಷಾರೋಪಣೆ."

4. The Inquiry Officer (Additional Registrar of Enquiries-4) on proper appreciation of oral and documentary evidence has held that the Disciplinary Authority has proved the above charge against DGO-1 Sri N. Srinivasa Reddy, Executive Engineer, and DGO-2 Sri K. Devegowda, Assistant Engineer – both of Bruhat Bengaluru Mahanagara Palike, Byatarayanapura Division, Bengaluru.

5. On re-consideration of inquiry report and taking note of the totality of the circumstances of the case, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. As per the First Oral Statement submitted by DGOs 1 & 2;

(1) DGO-1 Sri N. Srinivasa Reddy, has retired from service on 31/5/2020 (during the pendency of inquiry);
(2) DGO-2 Sri K Devegowda has retired from service on 30/11/2020 (during the pendency of inquiry).

7. Having regard to the nature of charge proved against DGO-1 Sri N. Srinivasa Reddy, Executive Engineer, and DGO-2 Sri K. Devegowda, Assistant Engineer – both of Bruhat Bengaluru

Mahanagara Palike, Byatarayanapura Division, Bengaluru, it is hereby recommended to the Government for imposing penalty of;

(i) permanently withholding 20% of pension payable to DGO-1 Sri N. Srinivasa Reddy;

(ii) permanently withholding 20% of pension payable to DGO-2 Sri K. Devegowda;

8. Action taken in the matter shall be intimated to this Authority.

Connected records are enclosed herewith.

25/5

**(JUSTICE B.S.PATIL)**
Upalokayukta,
State of Karnataka,
Bengaluru